# HIGH COURT OF KARNATAKA, BENGALURU

## NOTIFICATION NO. HCRB 3/2023 (DRIVER - KKR)

## DATED 06TH MARCH 2023

## RECRUITMENT OF CANDIDATES TO THE POST OF DRIVER

## LAST DATE FOR SUBMISSION OF APPLICATION THROUGH ONLINE: 06TH APRIL 2023

It is hereby notified that online applications are invited from eligible candidates belonging to ***Kalyana Karnataka Region only* – *Local Cadre)*** and who are qualified as on the last date fixed for submission of applications for Direct Recruitment of **02 Posts** of Drivers on the Establishment of High Court of Karnataka, Bengaluru, through online link on ***http://karnatakajudiciary.kar.nic.in/recruitment.php***

1. **Method of Recruitment**:

   Selection of candidates will be made in accordance with the High Court of Karnataka Service (Conditions of Service and Recruitment) Rules, 1973 as amended from time to time and the High Court of Karnataka Service (Direct Recruitment by Selection) Rules, 1984, as amended from time to time.

2. **Minimum Qualification**:

   The applicant must have passed SSLC or equivalent examination and must possess licence for driving Heavy Passenger Motor Vehicle or Heavy Goods Vehicle and have a minimum of 5 years experience in driving. Further, the applicants should have fair knowledge of English and Kannada.

**NOTE: 1) SSLC or equivalent examination means courses as prescribed in Government of Karnataka Circular No. DPAR 81 SCR 2017 dated 27.02.2018.**

**2) The candidates who are appointed as Drivers and posted to either Dharwad/Kalaburagi Benches and Leave Reserve Drivers in Principal Bench of High Court of Karnataka shall also discharge the office duties as assigned to them apart from the Drivers Duty.**

**3. Scale of Pay:**

₹25500 – 81100/- (Level-4) with admissible allowances as per the High Court of Karnataka (Officers & Officials) Revised Pay Rules 2018.

**4. Probation:**

The applicant if appointed, shall be on probation initially for a period of two years or for extended period, if necessary.

**5. Age Limit:**

1. As on the last date of submission of online application, the applicants must have attained the age of 18 years in respect of all categories and not attained the age of:

    a. 40 years in the case of a person belonging to Scheduled Caste / Scheduled Tribe / Category-I of other Backward Classes.

    b. 38 years in the case of persons belonging to Category II-A/ II-B/ III-A/ III-B of other Backward Classes; and

    c. 35 years in the case of a person belonging to General Merit.

2. Not withstanding anything contained in Rule 6 of the Karnataka Civil Services (General Recruitment) Rules, 1977

    a. In case of a candidate who is or was holding a post under the Government or a local authority or a Corporation established by a State Act or a Central Act or established by the Government under a State Act or Central Act and owned or controlled by the Government, the age is relaxed by the number of years during which he/she is or was holding such post or ten years whichever is less;

    b. In case of a candidate who is an Ex-serviceman - the age is relaxed by three years plus the number of years of service rendered by him in the Armed Forces of the Union;

    c. In case of a candidate who is a Widow - the age is relaxed by ten years;

3. The minimum and maximum age limit shall be as on the last date fixed for applying online i.e. 06th April 2023.

**6. Classification of Vacancies:**

**02 posts of Driver under Karnataka Kalyana Region**

| Category | Un-reserved | Women candidate | Rural Candidate | Kannada Medium Student | Project Displaced Person | Ex-Service men | Trans-gender # | Total |
|---|---|---|---|---|---|---|---|---|
| **General Merit** | - | 1 | - | - | - | - | - | **1** |
| **Cat - I** | 1 | - | - | - | - | - | - | **1** |
| **Total** | **1** | **1** | **-** | **-** | **-** | **-** | **-** | **2** |

**** Indicates the classification as per Government Order No. DPAR 179 SeNeNi 2020 dated 14.07.2021***

**7. General Instructions :**

While submitting application through online, the candidate shall ensure that he/she fulfills the eligibility criteria and other norms and that all the particulars furnished by him/her are correct in all respects. Further, the candidate shall read all the instructions carefully before submitting the online application.

**I. Proceedure for submitting application through online:**

a. The candidate shall submit his/her application through online on the High Court of Karnataka website ***https://karnatakajudiciary.kar.nic.in/recruitment.php*** **Applications sent/submitted by any mode other than online will not be considered.**

b. The candidate is required to fill up the required data while submitting the online application and payment of fee shall be made in accordance with the instruction mentioned hereunder. The candidate should ensure that the particulars filled in are correct in all respects before final submission of the online application. Application once submitted cannot be withdrawn or modified.

c. The candidate shall provide his/her Mobile number and valid Email ID mandatorily for communication at relevant columns while submitting online application. The authority is not responsible for non-receipt of SMS or Email due to furnishing of incorrect information.

d. The candidate shall scan his/her latest passport size photograph with white background (having 5 cms of length X 3.5 cms of breadth with max. size 50kb) and signature on white paper in black ball point pen (having 2.5 cms of length X 7.5 cms of breadth with max. size 25kb) in jpg format and upload the same, while submitting the online application. The jpg images shall be clear and visible, else the application will not be considered.

e. The candidate *shall mandatorily upload*

1. His/her $10^{th}$ standard or equivalent examination marks card,
2. Valid Driving Licence in Light Motor Vehicle with Heavy Passenger Motor Vehicle or Heavy Goods Vehicle,

at the time of submitting online application. The scanned document shall be uploaded in PDF format only and it shall be clear and readable.

f. Before final submission of online application, the candidate will be able to preview his/her duly filled application. Candidate is advised to take printout of the filled up application for his/her record.

g. The candidate should retain a copy of his/her application with application number carefully for generation of Intimation Letter from the link provided on the website of High Court of Karnataka and for any other information regarding his/her eligibility for Interview.

h. a) The candidate is advised to visit website of High Court of Karnataka – Recruitment Notifications Section at regular intervals for updates regarding Driver posts.

b) The list of eligible candidates short listed for Driving Test / Interview will be published on the High Court of Karnataka website - **https://karnatakajudiciary.kar.nic.in/recruitment.php** Further, a link will be provided for downloading the Intimation for Interview. The candidate must bring the said Intimation letter at the time of appearing for the Interview.

c) Intimation will also be sent to the eligible candidates through SMS and Email to the Email-ID furnished by the candidates at the time of submission of online application.

d) **The applicants who are shortlisted for Driving Skill Test shall have to pay the *"Driving Test Fee"* fixed by the concerned Regional Transport Office.**

e) No Intimations will be sent by post.

i) In case the candidate submits more than one online application form, he/she must note that application which is submitted in last by him/her will only be entertained by the Registry. **No correspondence requesting to accept previous application(s) will be entertained by the Registry.**

j) The candidates called for Driving Test / Interview will have to appear for the same at their own cost at the place and time decided and notified by High Court of Karnataka.

**II. Application Fee:**

a. The candidates belonging to General Merit and other Backward classes [other than Scheduled Caste / Scheduled Tribe / Category-I] shall pay an Application Fee of ₹ 500/- (Rupees Five Hundred Only).

b. Further, the candidates belonging to Scheduled Caste/ Scheduled Tribe / Category – I shall pay an Application Fee of ₹ 250/- (Rupees Two Hundred and Fifty Only) prescribed for the post, by any of the following mode of payment.

(i) **Online Payment:** On submission of online application, the candidate shall make the online payment of application fee by SBI online payment gateway mentioned in the online application.

**OR**

(ii) **Challan Form:** On submission of online application, the candidates shall download the challan through the SBI online payment gateway link as mentioned in the online application in PDF format and shall remit the prescribed fee in any branch of SBI. (System need to support PDF reader-like Adobe Acrobat)

**Note: i) After successful payment of fee from the SBI Portal, the candidates are hereby instructed to download the E-receipt from SBI Portal in PDF format and thereafter fill up payment/fee details by clicking *'SBI Payment Details'* Button. The PDF E-receipt should be uploaded by clicking on *'Application Fee and Fee Receipt Button'.***

**ii) The candidate must note that fee once paid will not be refunded in any circumstances even in case where fee has been paid by the candidate for more than one application.**

**8. Last date for submission of application and payment of application fee:**

a. **To avoid last minute rush, the candidates are advised to submit the online applications well in advance. The website will accept the applications round the clock upto 06th April 2023 till 11.59 p.m.**

b. For payment of fee through Online **or** through Challan at any Branch of State Bank of India is 12th April 2023 (within Bank working Hours).

**9. Candidates Claiming Reservations:**

a. under ***Scheduled Caste / Scheduled Tribe / Category-I / II (A) / II (B) / III (A) / III (B)*** shall possess the certificate in the form as prescribed by the Government of Karnataka and issued by the Competent Authority at the time of

submitting online application and produce the same whenever directed by the Competent Authority without fail.

b. under ***Kalyana Karnataka Region*** - ***Local Cadre,*** shall possess the Eligibility Certificate (Under Article 371(J) – *'Annexure – A'* issued by the Competent Authority on or before the last date for submitting online application as prescribed under the Karnataka Public Employment (Reservation in Appointment for Hyderabad-Karnataka Region) (Issue of Eligibility Certificates) Rules, 2013.

10. Candidates called for Document Verification / Driving Test / Interview shall produce a copy of:

a) Intimation for Interview alongwith Proof of Identity i.e., Voter ID or Aadhaar Card or PAN Card or Ration card or Passport and Driving Licence in Original.

b) original testimonials with regard to Educational Qualification i.e., Tenth Standard or its equivalent examination certificate, Caste Certificate, *Kalyana Karnataka* Region - *Local Cadre 'Annexure – A'* for verification purpose.

(c) three certificates of Character i.e., one certificate issued from the Head of the Institution in which he/she last studied with study details and other two certificates from respectable persons not being relative but who is well acquainted with him/her.

11. If the candidate is employed/working in any State Government or Central Government or an establishment in Public Sector, the candidate shall mention **'Yes'** or **'No'** in the online application and if the candidate is selected, he/she shall produce ***"No Objection Certificate"*** from the concerned department, where he/she is working as per amended Rule 11 of Karnataka Civil Service (General Recruitment) Rules, 1977.

12. **Category / Reservations mentioned in the online application will be final. No request for change of Category / Reservations will be entertained later**.

13. Merely attending the Interview shall not confer any right to appointment and no candidate shall be appointed to the post unless the High Court of Karnataka is satisfied, after such enquiries as may be considered necessary that the candidate is suitable in all respects for appointment to the post.

14. The candidate appointed to the post of Driver is liable to be posted at High Court of Karnataka, Principal Bench at Bengaluru or Benches at Dharwad and Kalaburagi.

15. If any candidate attempts to obtain extraneous support by any means for candidature from any officials or non-officials, he/she will not be eligible for appointment.

16. **On verification, at any time or at any stage of recruitment, if it is found that the information furnished by the candidate in the application is false or the candidate does not fulfill any of the eligibility criteria and/or that he/she has suppressed/twisted or truncated any material facts, his/her candidature will stand cancelled. If any of these shortcomings is found even after appointment, his/her appointment shall be liable to be terminated. Furnishing of wrong, incomplete or incorrect information would not only lead to disqualification but also liable for criminal prosecution for furnishing such information.**

**BY ORDER OF HON'BLE THE CHIEF JUSTICE,**

**Sd/-**
**(K. S. BHARATH KUMAR)**
**REGISTRAR GENERAL**

# ಕರ್ನಾಟಕ ಉಚ್ಚ ನ್ಯಾಯಾಲಯ,

# ಬೆಂಗಳೂರು

## ಅಧಿಸೂಚನೆ ಸಂಖ್ಯೆ: HCRB 3/2023 (DRIVER – KKR)

## ದಿನಾಂಕ 06ನೇ ಮಾರ್ಚ್ 2023

## ವಾಹನ ಚಾಲಕರ ಹುದ್ದೆಗಳಿಗಾಗಿ ಅಭ್ಯರ್ಥಿಗಳ ನೇಮಕಾತಿ

## ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 06ನೇ ಏಪ್ರಿಲ್ 2023

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ, **ಸ್ಥಳೀಯ ವೃಂದಗಳಲ್ಲಿನ 2** ವಾಹನ ಚಾಲಕರ ಹುದ್ದೆಗಳಿಗೆ ಅರ್ಜಿಗಳನ್ನು ಸ್ವೀಕರಿಸುವುದಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದವರೆಗೂ ಅರ್ಹತೆ ಹೊಂದಿರುವ, ಅಂದರೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಸೇರಿದ ಅಭ್ಯರ್ಥಿಗಳು ಮಾತ್ರ ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್ ***http://karnatakajudiciary.kar.nic.in/recruitment.php*** **ಮೂಲಕ** ಸಲ್ಲಿಸಬಹುದೆಂದು ಅಧಿಸೂಚಿಸಲಾಗಿದೆ.

೧. **ನೇಮಕಾತಿ ವಿಧಾನ:**

ಅಭ್ಯರ್ಥಿಗಳ ಆಯ್ಕೆಯನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಸೇವಾ ಮತ್ತು ನೇಮಕಾತಿ ಷರತ್ತುಗಳು) ನಿಯಮಗಳು, ೧೯೭೩ ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕರ್ನಾಟಕ ಉಚ್ಚ ನ್ಯಾಯಾಲಯ ಸೇವಾ (ಆಯ್ಕೆಯ ಮೂಲಕ ನೇರ ನೇಮಕಾತಿ) ನಿಯಮಗಳು, ೧೯೮೮ ಇವುಗಳ ಅನುಸಾರವಾಗಿ ಮಾಡಲಾಗುವುದು.

೨. **ಕನಿಷ್ಠ ವಿದ್ಯಾರ್ಹತೆ:**

ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯನ್ನು ಕಡ್ಡಾಯವಾಗಿ ತೇರ್ಗಡೆ ಹೊಂದಿರಬೇಕು ಹಾಗೂ ಭಾರಿ ಪ್ರಯಾಣಿಕ ಮೋಟಾರು ವಾಹನ ಅಥವಾ ಸರಕು ಸಾಗಣೆ ಮಾಡುವ ಭಾರೀ ಪ್ರಮಾಣ ವಾಹನವನ್ನು ಚಾಲನೆ ಮಾಡುವ ಚಾಲನಾ ಪರವಾನಗಿಯನ್ನು ಹೊಂದಿರಬೇಕು ಹಾಗೂ ಚಾಲನೆಯಲ್ಲಿ ಕನಿಷ್ಠ ೫ ವರ್ಷಗಳ ಅನುಭವವನ್ನು ಹೊಂದಿರಬೇಕು. ಮುಂದುವರೆದು, ಅಭ್ಯರ್ಥಿಯು ಇಂಗ್ಲೀಷ್ ಮತ್ತು ಕನ್ನಡ ಭಾ಼ಷೆಯನ್ನು ಬಲ್ಲವರಾಗಿರಬೇಕು.

***ವಿ.ಸೂ: ೧)** **ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆ ಎಂದರೆ ಕರ್ನಾಟಕ ಸರ್ಕಾರ ಸುತ್ತೋಲೆ ಸಂಖ್ಯೆ ಸಿಆಸುಇ ೮೧ ಸೇವನೆ ೨೦೧೭, ದಿನಾಂಕ ೨೭.೦೨.೨೦೧೮ ರಲ್ಲಿ ಸೂಚಿಸಿದಂತಹ ಕೋರ್ಸುಗಳು.**

೨) **ಅಭ್ಯರ್ಥಿಗಳು ಚಾಲಕರ ಹುದ್ದೆಗೆ ನೇಮಕಗೊಂಡಲ್ಲಿ ಮತ್ತು ಅಂತಹ ಅಭ್ಯರ್ಥಿಗಳು ಧಾರವಾಡ/ಕಲಬುರಗಿ ಪೀಠಕ್ಕೆ ನಿಯೋಜನೆಗೊಂಡರೆ ಅಥವಾ ಪ್ರಧಾನ ಪೀಠದಲ್ಲಿ ಕರ್ತವ್ಯದ ಬಿಡುವಿನ ವೇಳೆಯಲ್ಲಿ** (Leave Reserve duty) **ಇತರೆ ಕಛೇರಿ ಕರ್ತವ್ಯಗಳನ್ನು ಸಹ ನಿರ್ವಹಿಸಬೇಕಾಗಿರುತ್ತದೆ.**

**೩. ವೇತನ ಶ್ರೇಣಿ:**

ಕರ್ನಾಟಕ ಉಚ್ಚ ನ್ಯಾಯಾಲಯದ (ಅಧಿಕಾರಿ ಮತ್ತು ನೌಕರರ) ಪರಿಷ್ಕೃತ ವೇತನ ಶ್ರೇಣಿ ನಿಯಮ ೨೦೧೮ ಅನುಸಾರ ₹25500 – 81100 (Level - 4) ಮತ್ತು ಇತರೆ ಭತ್ಯೆಗಳು.

**೪. ಸೇವಾ ಪರಿವೀಕ್ಷಣಾ ಅವಧಿ:**

ಅಭ್ಯರ್ಥಿಯು ನೇಮಕಗೊಂಡ ಪಕ್ಷದಲ್ಲಿ ಪ್ರಾರಂಭಿಕವಾಗಿ ಎರಡು ವರ್ಷಗಳ ಅವಧಿಗೆ ಅಥವಾ ಅಗತ್ಯವಿದ್ದರೆ ವಿಸ್ತರಿಸಬಹುದಾದ ಅವಧಿಗೆ ಪರಿವೀಕ್ಷಣಾರ್ಥಿಗಳಾಗಿರುತ್ತಾರೆ.

**೫. ನೇಮಕಾತಿಗಾಗಿ ವಯೋಮಿತಿ:**

೧. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕದಂದು ಎಲ್ಲಾ ಪ್ರವರ್ಗದವರು ಕನಿಷ್ಠ 18 ವರ್ಷದವರಾಗಿರಬೇಕು ಮತ್ತು ಗರಿಷ್ಠ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು:

a. ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ ಅಥವಾ ಇತರೇ ಹಿಂದುಳಿದ ಜಾತಿಗಳ ಪ್ರವರ್ಗ – ೧ಕ್ಕೆ ಸೇರಿದ ಪಕ್ಷದಲ್ಲಿ ಅವರು ಗರಿಷ್ಠ 40 ವರ್ಷ ವಯಸ್ಸು ಮೀರಿರಬಾರದು.

b. ಇತರೇ ಹಿಂದುಳಿದ ವರ್ಗಗಳ ಪ್ರವರ್ಗ '೨ಎ' ಅಥವಾ '೨ಬಿ' ಅಥವಾ '೩ಎ' ಅಥವಾ '೩ಬಿ'ಗೆ ಸೇರಿದ್ದಲ್ಲಿ ಗರಿಷ್ಠ 38 ವರ್ಷ ವಯಸ್ಸು ಮೀರಿರಬಾರದು; ಮತ್ತು

c. ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷ ವಯಸ್ಸು ಮೀರಿರಬಾರದು.

೨. ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು ೧೯೭೭ರ ೬ನೇ ನಿಯಮದ ಅನುಸಾರ, ಈ ಕೆಳಗಿನ ಸಂದರ್ಭಗಳಲ್ಲಿ ಸದರಿ ನಿಯಮಗಳಲ್ಲಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಕೆಳಗೆ ತಿಳಿಸಿರುವಷ್ಟರ ಮಟ್ಟಿಗೆ ಸಡಿಲಿಕೆ ಮಾಡಲಾಗುವುದು.

a. ಅಭ್ಯರ್ಥಿಯು, ರಾಜ್ಯ ಅಧಿನಿಯಮ ಅಥವಾ ಕೇಂದ್ರ ಅಧಿನಿಯಮದ ಮೇರೆಗೆ ಸ್ಥಾಪಿತವಾದ ಅಥವಾ ರಾಜ್ಯ ಅಥವಾ ಕೇಂದ್ರ ಅಧಿನಿಯಮದಡಿಯಲ್ಲಿ ಸರ್ಕಾರದ ಮೂಲಕ ಸ್ಥಾಪಿತವಾದ ಮತ್ತು

ಸರ್ಕಾರದ ಅಧೀನದಲ್ಲಿ ಅಥವಾ ನಿಯಂತ್ರಣದಲ್ಲಿ ಇರುವ ಸರ್ಕಾರಿ ಅಥವಾ ಸ್ಥಳೀಯ ಪ್ರಾಧಿಕಾರ ಅಥವಾ ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪಕ್ಷದಲ್ಲಿ ಅಥವಾ ಯಾವುದೇ ಹುದ್ದೆಯನ್ನು ಹೊಂದಿದ್ದಲ್ಲಿ ಹಾಗೆ ಸಲ್ಲಿಸಿರುವ ಅವಧಿ ಅಥವಾ 10 ವರ್ಷ ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟು ವರ್ಷಗಳ ವಯೋಮಿತಿಯ ಸಡಿಲಿಕೆಗೆ ಅರ್ಹರಾಗಿರುತ್ತಾರೆ.

b. ಮಾಜಿ ಸೈನಿಕರಿಗೆ, ಕೇಂದ್ರ ಸಶಸ್ತ್ರ ಪಡೆಯಲ್ಲಿ ಅವರು ಸೇವೆ ಸಲ್ಲಿಸಿದ ಅವಧಿಯ ವರ್ಷಗಳ ಜೊತೆಗೆ ಮೂರು ವರ್ಷಗಳು ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.

c. ಅಭ್ಯರ್ಥಿಯು ವಿಧವೆಯಾಗಿರುವ ಸಂದರ್ಭದಲ್ಲಿ ಹತ್ತು ವರ್ಷಗಳ ವಯೋಮಿತಿ ಸಡಿಲಿಕೆ ಇರುತ್ತದೆ.

೩. ಕನಿಷ್ಠ ಮತ್ತು ಗರಿಷ್ಠ ವಯೋಮಿತಿಯು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕಾದ ಕೊನೆಯ ದಿನಾಂಕವನ್ನು ಆಧರಿಸಿರುತ್ತದೆ. ಅಂದರೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 06ನೇ ಏಪ್ರಿಲ್ 2023 ಅನ್ನು ಆಧರಿಸಿರುತ್ತದೆ.

**೬. ಖಾಲಿ ಹುದ್ದೆಗಳ ವರ್ಗೀಕರಣ:**

**ಕಲ್ಯಾಣ ಕರ್ನಾಟಕ ಪ್ರದೇಶದ 02 ಹುದ್ದೆಗಳ ಮೀಸಲಾತಿ**
**ಅಂದರೆ ಸಂವಿಧಾನದ 371–(ಜೆ) ಅನುಚ್ಛೇದ**

| ಪ್ರವರ್ಗ | ಮೀಸಲು ರಹಿತ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಕನ್ನಡ ಮಾಧ್ಯಮ ಅಭ್ಯರ್ಥಿ | ಯೋಜನಾ ನಿರಾಶ್ರಿತರು | ಮಾಜಿ ಸೈನಿಕ | ಇತರೆ * | ಒಟ್ಟು |
|---|---|---|---|---|---|---|---|---|
| **ಸಾಮಾನ್ಯ ಅಭ್ಯರ್ಥಿ** | - | 1 | - | - | - | - | **-** | **1** |
| **ಪ್ರವರ್ಗ–I** | 1 | - | - | - | - | - | **-** | **1** |
| **ಒಟ್ಟು** | **1** | **1** | **-** | **-** | **-** | **-** | **-** | **2** |

*** Indicates the classification as per Government Order No. DPAR 179 SeNeNi 2020 dated 14.07.2021**

**೭. ಅಭ್ಯರ್ಥಿಗಳಿಗೆ ಸೂಚನೆಗಳು:**

ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ, ಅಭ್ಯರ್ಥಿಯು, ಮೇಲೆ ಸೂಚಿಸಲಾದಂತಹ ತನ್ನ ವಿದ್ಯಾರ್ಹತೆ ಹಾಗೂ ಇತರ ಮಾನದಂಡಗಳನ್ನು ಪೂರ್ಣಗೊಳಿಸಲಾಗಿದೆಯೆಂದು ಹಾಗೂ ತಾನು ಒದಗಿಸಿರುವ ಎಲ್ಲಾ ವಿವರಗಳು ಎಲ್ಲಾ ಆಯಾಮಗಳಲ್ಲೂ ಸರಿಯಾಗಿವೆಯೆಂದು ಖಚಿತಪಡಿಸಿಕೊಳ್ಳತಕ್ಕದ್ದು. ಅಭ್ಯರ್ಥಿಗಳು, ಅರ್ಜಿ ಸಲ್ಲಿಸುವುದಕ್ಕಿಂತ ಮುಂಚೆ ಈ ಮುಂದೆ ಹೇಳಿರುವ ಎಲ್ಲಾ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು.

## I. **ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ವಿಧಾನ:**

a. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ***https://karnatakajudiciary.kar.nic.in/recruitment.php*** ವೆಬ್‌ಸೈಟ್‌ನಲ್ಲಿ ಸಲ್ಲಿಸತಕ್ಕದ್ದು. **ಆನ್‌ಲೈನ್ ಹೊರತುಪಡಿಸಿ ಬೇರೆ ಯಾವುದೇ ವಿಧಾನದಿಂದ ಕಳುಹಿಸಲಾದ/ಸಲ್ಲಿಸಲಾದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ**.

b. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅಗತ್ಯವಿರುವ ಮಾಹಿತಿಯನ್ನು ಭರ್ತಿ ಮಾಡಿ, ಈ ಕೆಳಗೆ ಉಲ್ಲೇಖಿಸಲಾದ ಸೂಚನೆಗೆ ಅನುಗುಣವಾಗಿ ಶುಲ್ಕವನ್ನು ಪಾವತಿಸತಕ್ಕದ್ದು. ಆನ್‌ಲೈನ್ ಅರ್ಜಿಯ ಅಂತಿಮ ಸಲ್ಲಿಕೆಗೆ ಮೊದಲು ಅಭ್ಯರ್ಥಿಯು ಭರ್ತಿ ಮಾಡಿದ ವಿವರಗಳು ಎಲ್ಲಾ ರೀತಿಯಲ್ಲೂ ಸರಿಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳತಕ್ಕದ್ದು. ಒಮ್ಮೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯಲು ಅಥವಾ ಮಾರ್ಪಡಿಸಲು ಅವಕಾಶವಿರುವುದಿಲ್ಲ.

c. ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಸಂಬಂಧಿತ ಕಾಲಂಗಳಲ್ಲಿ ಸಂವಹನಕ್ಕಾಗಿ ಕಡ್ಡಾಯವಾಗಿ ಅವನ/ಅವಳ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ID ಯನ್ನು ಒದಗಿಸಬೇಕು. ತಪ್ಪಾದ ಮಾಹಿತಿಯನ್ನು ಒದಗಿಸಿ, ಎಸ್‌ಎಮ್‌ಎಸ್ ಅಥವಾ ಇ–ಮೇಲ್ ಮುಖಾಂತರ ಸೂಚನೆ/ಸಂದೇಶಗಳು ಅಭ್ಯರ್ಥಿಗಳಿಗೆ ತಲುಪದಿದ್ದ ಪಕ್ಷದಲ್ಲಿ ಈ ಪ್ರಾಧಿಕಾರವು ಜವಾಬ್ದಾರರಾಗುವುದಿಲ್ಲ.

d. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಗಾತ್ರದ ಶ್ವೇತ ವರ್ಣದ ಹಿನ್ನಲೆಯುಳ್ಳ ಛಾಯಾಚಿತ್ರವನ್ನು ಸ್ಕ್ಯಾನ್ ಮಾಡಬೇಕು (5 ಸೆ.ಮೀ. ಉದ್ದ X 3.5 ಸೆ.ಮೀ. ಅಗಲ ಮತ್ತು ಗರಿಷ್ಠ 50 ಕೆಬಿ ಗಾತ್ರ) ಮತ್ತು ಕಪ್ಪು ಬಾಲ್ ಪಾಯಿಂಟ್ ಪೆನ್‌ನಲ್ಲಿ ಬಿಳಿ ಕಾಗದದ ಮೇಲೆ ಸಹಿಯನ್ನು (2.5 ಸೆ.ಮೀ. ಉದ್ದ X 7.5 ಸೆ.ಮೀ. ಅಗಲ ಮತ್ತು ಗರಿಷ್ಠ 25 ಕೆಬಿ ಗಾತ್ರ) jpg ಸ್ವರೂಪದಲ್ಲಿ ಮತ್ತು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವಾಗ ಅದನ್ನು ಅಪ್‌ಲೋಡ್ ಮಾಡಬೇಕು. jpg ಚಿತ್ರಗಳು ಸ್ಪಷ್ಟವಾಗಿ ಕಾಣುವಂತಿರಬೇಕು, ಹಾಗೆ ಇಲ್ಲದಿದ್ದ ಪಕ್ಷದಲ್ಲಿ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

e. **ಅಭ್ಯರ್ಥಿಯು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಕಡ್ಡಾಯವಾಗಿ**

೧. ಹತ್ತನೇ ತರಗತಿಯ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ,

೨. ಲಘು ವಾಹನ ಚಾಲನಾ *ಜೊತೆಗೆ* ಭಾರಿ ಪ್ರಯಾಣಿಕ ಮೋಟಾರು ವಾಹನ ಅಥವಾ ಸರಕು ಸಾಗಣೆ ಮಾಡುವ ಭಾರೀ ಪ್ರಮಾಣ ವಾಹನವನ್ನು ಚಾಲನೆ ಮಾಡುವ ಚಾಲನಾ ಪರವಾನಗಿಯನ್ನು

ಅಪ್‌ಲೋಡ್ ಮಾಡತಕ್ಕದ್ದು. ಸ್ಕ್ಯಾನ್ ಮಾಡಿದ ಡಾಕ್ಯುಮೆಂಟ್ ಅನ್ನು PDF ನಮೂನೆಯಲ್ಲಿ ಮಾತ್ರ ಅಪ್‌ಲೋಡ್ ಮಾಡತಕ್ಕದ್ದು ಹಾಗೂ ಅಪ್‌ಲೋಡ್ ಮಾಡಿದ ಪ್ರತಿಯು ಸ್ಪಷ್ಟವಾಗಿರಬೇಕು.

f. ಆನ್‌ಲೈನ್ ಅರ್ಜಿಯ ಅಂತಿಮ ಸಲ್ಲಿಕೆಗೆ ಮೊದಲು, ಅಭ್ಯರ್ಥಿಯು ಅವನ/ಅವಳ ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಪೂರ್ವವೀಕ್ಷಿಸಲು (preview) ಸಾಧ್ಯವಾಗುತ್ತದೆ. ಅಭ್ಯರ್ಥಿಯು ಅವನ/ಅವಳ ದಾಖಲೆಗಾಗಿ ಭರ್ತಿ ಮಾಡಿದ ಅರ್ಜಿಯನ್ನು ಮುದ್ರಿಸಿಟ್ಟುಕೊಳ್ಳುವಂತೆ ಸೂಚಿಸಲಾಗಿದೆ.

g. ಅಭ್ಯರ್ಥಿಗಳು ತಮ್ಮ ಅರ್ಜಿಯ ಪ್ರತಿ ಹಾಗೂ ಅರ್ಜಿ ಸಂಖ್ಯೆಯನ್ನು ಜಾಗರೂಕತೆಯಿಂದ ಇಟ್ಟುಕೊಳ್ಳಬೇಕು. ಕರ್ನಾಟಕ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಒದಗಿಸಲಾಗುವ ಲಿಂಕ್‌ನಿಂದ ಸೂಚನಾ ಪತ್ರಕ್ಕಾಗಿ ಮತ್ತು ಸಂದರ್ಶನಕ್ಕೆ ಅರ್ಹತೆ ಕುರಿತಂತೆ ಇತರೆ ಯಾವುದೇ ಮಾಹಿತಿಗಾಗಿ, ಜಾಲತಾಣಕ್ಕೆ ಭೇಟಿನೀಡತಕ್ಕದ್ದು.

h. (i) ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದ ನೇಮಕಾತಿ ಅಧಿಸೂಚನೆ ವಿಭಾಗಕ್ಕೆ ನಿಯತಕಾಲಿಕವಾಗಿ ಭೇಟಿ ನೀಡಿ ವಾಹನ ಚಾಲಕರ ಹುದ್ದೆಗಳ ಕುರಿತಾದ ಅಪ್‌ಡೇಟ್ ಪಡೆಯತಕ್ಕದ್ದು.

(ii) ವಾಹನ ಚಾಲನಾ ಪರೀಕ್ಷೆಗೆ / ಸಂದರ್ಶನಕ್ಕೆ ಆಯ್ಕೆ ಮಾಡಲಾದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಜಾಲತಾಣದಲ್ಲಿ ಪ್ರಕಟಿಸಲಾಗುತ್ತದೆ – *https://karnatakajudiciary.kar.nic.in/recruitment.php* ಇದಲ್ಲದೆ, ಸಂದರ್ಶನಕ್ಕಾಗಿ ಸೂಚನಾ ಪತ್ರವನ್ನು ಡೌನ್‌ಲೋಡ್ ಮಾಡಲು ಲಿಂಕ್ ಅನ್ನು ಒದಗಿಸಲಾಗುತ್ತದೆ. ಅಭ್ಯರ್ಥಿಯು ಸಂದರ್ಶನಕ್ಕೆ ಹಾಜರಾಗುವ ಸಮಯದಲ್ಲಿ ತಿಳಿಸಲಾದ ಸೂಚನೆ ಪತ್ರವನ್ನು ತಪ್ಪದೆ ತರತಕ್ಕದ್ದು.

(iii) ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿದ ಇಮೇಲ್ – ID ಹಾಗೂ ಮೊಬೈಲ್ ಸಂಖ್ಯೆಗೆ ಅರ್ಹ ಅಭ್ಯರ್ಥಿಗಳಿಗೆ SMS/ಇಮೇಲ್ ಮುಖಾಂತರ ಮಾಹಿತಿಯನ್ನು ರವಾನಿಸಲಾಗುತ್ತದೆ.

(iv) ವಾಹನ ಚಾಲನಾ ಪರೀಕ್ಷೆಗೆ ಆಯ್ಕೆಗೊಂಡ ಅಭ್ಯರ್ಥಿಗಳು *"ವಾಹನ ಚಾಲನಾ ನೈಪುಣ್ಯ ಪರೀಕ್ಷೆ" ಗೆ ಸಂಬಂಧಿಸಿದಂತೆ* ಪ್ರಾದೇಶಿಕ ಸಾರಿಗೆ ಕಛೇರಿಯವರು ನಿಗದಿಪಡಿಸುವ ಶುಲ್ಕವನ್ನು ಕಟ್ಟಬೇಕು.

(v) ಅಂಚೆ ಮೂಲಕ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ.

i. ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ಅವನು/ಅವಳು ಕಡೆಯದಾಗಿ ಸಲ್ಲಿಸಿದ ಅರ್ಜಿಯನ್ನು ಮಾತ್ರ ಪರಿಗಣಿಸಲಾಗುತ್ತದೆಂದು ಗಮನದಲ್ಲಿಟ್ಟುಕೊಳ್ಳತಕ್ಕದ್ದು. **ಕೊನೆಯ ಅರ್ಜಿಯನ್ನು ಬಿಟ್ಟು ಮತ್ಯಾವ ಅರ್ಜಿ ಪರಿಗಣಿಸಲು ಸಲ್ಲಿಸುವ ಕೋರಿಕೆಗಳನ್ನು ಪರಿಗಣಿಸಲಾಗುವುದಿಲ್ಲ**.

j. ವಾಹನ ಚಾಲನಾ ಪರೀಕ್ಷೆ / ಮೌಖಿಕ ಪರೀಕ್ಷೆಗೆ ಕರೆಯಲಾಗುವ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯವು ನಿಗದಿಪಡಿಸುವ ಸ್ಥಳ ಹಾಗೂ ಸಮಯಕ್ಕೆ ತಮ್ಮ ಸ್ವಂತ ಖರ್ಚಿನಲ್ಲೇ ಹಾಜರಾಗತಕ್ಕದ್ದು.

## II. ಅರ್ಜಿ ಶುಲ್ಕ:

a. ಅಭ್ಯರ್ಥಿಗಳು (ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ–Iಕ್ಕೆ ಸೇರಿದ ಅಭ್ಯರ್ಥಿಗಳನ್ನು ಹೊರತುಪಡಿಸಿ) ಹುದ್ದೆಗೆ ಸಂಬಂಧಿಸಿದಂತೆ ನಿಗದಿ ಪಡಿಸಿದ ರೂ. 500/–(ಐದು ನೂರು ರೂಪಾಯಿಗಳು ಮಾತ್ರ) ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ-Iಕ್ಕೆ ಸೇರಿದ ಅಭ್ಯರ್ಥಿಗಳು ರೂ. 250/– (ಎರಡು ನೂರ ಐವತ್ತು ರೂಪಾಯಿಗಳು ಮಾತ್ರ) ಅರ್ಜಿ ಶುಲ್ಕವನ್ನು, ಈ ಮುಂದಿನ ಯಾವುದೇ ವಿಧಾನದ ಮೂಲಕ ಸಂದಾಯ / ಪಾವತಿ ಮಾಡತಕ್ಕದ್ದು:

i. **ಆನ್‌ಲೈನ್ ಮೂಲಕ ಶುಲ್ಕ ಸಂದಾಯ**: ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ತರುವಾಯ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಚಲನ್ ಅನ್ನು ಪಿಡಿಎಫ್‌ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಎಸ್‌ಬಿಐ ನ ಯಾವುದೇ ಶಾಖೆಯಲ್ಲಿ ಪಾವತಿಸತಕ್ಕದ್ದು.

**ಅಥವಾ**

ii. **ಚಲನ್ ನಮೂನೆಯಲ್ಲಿ ಶುಲ್ಕ ಸಂದಾಯ**: ಅಭ್ಯರ್ಥಿಗಳು, ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಅರ್ಜಿಯಲ್ಲಿ ಸೂಚಿಸಿದಂತಹ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆನ್‌ಲೈನ್ ಪೇಮೆಂಟ್ ಗೇಟ್‌ವೇ ಮೂಲಕ ಪಿ.ಡಿ.ಎಫ್ ನಮೂನೆಯಲ್ಲಿ ಚಲನ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು ಮತ್ತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಯಾವುದೇ ಶಾಖೆಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಪಾವತಿ ಮಾಡತಕ್ಕದ್ದು. (ನೀವು ಉಪಯೋಗಿಸುವ ಕಂಪ್ಯೂಟರ್ ಪಿ.ಡಿ.ಎಫ್ ರೀಡರ್– ಅಡೋಬ್ ಅಕ್ರೋಬ್ಯಾಟ್ ಸಪೋರ್ಟ್ ಹೊಂದಿರತಕ್ಕದ್ದು).

**ಸೂಚನೆ ೧: ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪೋರ್ಟಲ್‌ನಿಂದ ಶುಲ್ಕವನ್ನು ಯಶಸ್ವಿಯಾಗಿ ಪಾವತಿಸಿದ ನಂತರ, ಅಭ್ಯರ್ಥಿಗಳು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ**

**ಪೋರ್ಟಲ್‌ನಿಂದ ಪಿ.ಡಿ.ಎಫ್ ರೂಪದಲ್ಲಿ ಇ-ರಶೀದಿಯನ್ನು ಡೌನಲೋಡ್ ಮಾಡಲು ಮತ್ತು ನಂತರ 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಪಾವತಿ ವಿವರಗಳು' ಬಟನ್ ಕ್ಲಿಕ್ ಮಾಡುವ ಮೂಲಕ ಪಾವತಿ/ಶುಲ್ಕ ವಿವರಗಳನ್ನು ಭರ್ತಿ ಮಾಡಲು ಸೂಚಿಸಲಾಗಿದೆ. 'ಅರ್ಜಿ ಶುಲ್ಕ ಮತ್ತು ರಶೀದಿ ಬಟನ್' ಕ್ಲಿಕ್ ಮಾಡುವ ಮೂಲಕ ಪಿಡಿಎಫ್ ಇ-ರಶೀದಿಯನ್ನು ಅಪ್‌ಲೋಡ್ ಮಾಡಬೇಕು.**

**ಸೂಚನೆ ೨: ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಯಾವುದೇ ಸಂದರ್ಭದಲ್ಲೂ ಹಿಂತಿರುಗಿಸಲಾಗುವುದಿಲ್ಲವೆಂಬ ಅಂಶವನ್ನು ಗಮನದಲ್ಲಿಟ್ಟು-ಕೊಳ್ಳಬೇಕು. ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ ಪಕ್ಷದಲ್ಲೂ ಸಹ ಒಮ್ಮೆ ಪಾವತಿ ಮಾಡಿದ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ.**

**೮. ಅರ್ಜಿ ಸಲ್ಲಿಸಲು ಹಾಗೂ ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ :**

a. **ಕೊನೆಯ ಕ್ಷಣದಲ್ಲಿ ಅರ್ಜಿ ಸಲ್ಲಿಸುವಾಗ ಆಗಬಹುದಾದ ಒತ್ತಡಗಳನ್ನು ತಪ್ಪಿಸುವ ಸಲುವಾಗಿ ಅಭ್ಯರ್ಥಿಗಳು ಕೊನೆಯ ದಿನಾಂಕದ ಮುಂಚಿತವಾಗಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಸಲಹೆ ನೀಡಲಾಗಿದೆ. ಆನ್‌ಲೈನ್ ಮೂಲಕ 06ನೇ ಏಪ್ರಿಲ್ 2023 (ರಾತ್ರಿ 11.59ರವರೆಗೆ) ಅರ್ಜಿಗಳನ್ನು ಸ್ವೀಕರಿಸಲಾಗುತ್ತದೆ.**

b. ಆನ್‌ಲೈನ್ ಅಥವಾ ಚಲನ್ ಮೂಲಕ ಶುಲ್ಕವನ್ನು ಸಂದಾಯ ಮಾಡುವುದಕ್ಕಾಗಿ **12**ನೇ ಏಪ್ರಿಲ್ **2023** (ಬ್ಯಾಂಕ್‌ಗಳ ಕೆಲಸದ ವೇಳೆಯಲ್ಲಿ)

**೯. ಮೀಸಲಾತಿ ಕೋರುವ ಅಭ್ಯರ್ಥಿಗಳು:**

a. **ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಪ್ರವರ್ಗ – I / II** ಎ / **II** ಬಿ / **III** ಎ/ **III** ಬಿ ಪ್ರವರ್ಗಗಳಡಿಯಲ್ಲಿ ಮೀಸಲಾತಿ ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರವು ನಿಗದಿಪಡಿಸಿರುವ ನಮೂನೆಯಲ್ಲಿ ಮತ್ತು ಸಕ್ಷಮ ಪ್ರಾಧಿಕಾರವು ನೀಡಿರುವ ಪ್ರಮಾಣಪತ್ರವನ್ನು ಆನ್‌ಲೈನ್ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಹೊಂದಿರತಕ್ಕದ್ದು ಮತ್ತು ಪ್ರಾಧಿಕಾರವು ನಿರ್ದೇಶಿಸಲ್ಪಟ್ಟಾಗ ತಪ್ಪದೇ ಹಾಜರು ಪಡಿಸುವುದು.

b. **ಕಲ್ಯಾಣ ಕರ್ನಾಟಕ ಪ್ರದೇಶದ (ಅನುಚ್ಛೇದ ೩೭೧-ಜೆ)** ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು, ಕರ್ನಾಟಕ ಸರ್ಕಾರಿ ಉದ್ಯೋಗ (ಕಲ್ಯಾಣ ಕರ್ನಾಟಕ ಪ್ರದೇಶ ಅರ್ಹತಾ ಪ್ರಮಾಣಪತ್ರಗಳು) ನಿಯಮಗಳು, ೨೦೧೩ರ ಅಡಿಯಲ್ಲಿ ಗೊತ್ತುಪಡಿಸಿದಂತೆ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕ ಅಥವಾ ಅದಕ್ಕೂ ಮುಂಚಿತವಾಗಿಯೇ ಸಕ್ಷಮ ಪ್ರಾಧಿಕಾರವು ನೀಡುವ ಯುಕ್ತ ಪ್ರಮಾಣಪತ್ರವನ್ನು (ಅನುಬಂಧ – ಎ) ಹೊಂದಿರತಕ್ಕದ್ದು.

೧೦. ದಾಖಲೆಗಳ ಪರಿಶೀಲನೆ / ವಾಹನ ಚಾಲನಾ ಪರೀಕ್ಷೆ / ಮೌಖಿಕ ಸಂದರ್ಶನಕ್ಕೆ ಕರೆಯಲಾದ ಅಭ್ಯರ್ಥಿಗಳು ಈ ಕೆಳಗಿನವುಗಳ ಪ್ರತಿಯನ್ನು ಹಾಜರುಪಡಿಸಬೇಕು:

- ❖ ಸಂದರ್ಶನಕ್ಕೆ ಬರುವಾಗ ಅಭ್ಯರ್ಥಿಗಳು ತಮ್ಮ ಮತದಾರರ ಗುರುತಿನ ಚೀಟಿ ಅಥವಾ ಆಧಾರ್ ಕಾರ್ಡ್ ಅಥವಾ ಪ್ಯಾನ್ ಕಾರ್ಡ್ ಅಥವಾ ಡ್ರೈವಿಂಗ್ ಲೈಸೆನ್ಸ್ ಅಥವಾ ರೇಷನ್ ಕಾರ್ಡ್ ಅಥವಾ ಪಾಸ್‌ಪೋರ್ಟ್ ಅನ್ನು ಮೂಲ ಪ್ರತಿಗಳೊಂದಿಗೆ ತರತಕ್ಕದ್ದು.

- ❖ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ, ಯುಕ್ತ ವಾಹನ ಚಾಲನ ಪರವಾನಗಿ / ಜಾತಿ ಪ್ರಮಾಣಪತ್ರ / ಕಲ್ಯಾಣ ಕರ್ನಾಟಕ ಪ್ರದೇಶದ (ಅನುಬಂಧ – ಎ) ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ಪರಿಶೀಲನೆಗಾಗಿ ಸಂಬಂಧಿಸಿದ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸತಕ್ಕದ್ದು.

- ❖ ಅಭ್ಯರ್ಥಿಯ ಉತ್ತಮ ನಡತೆಯ ಬಗ್ಗೆ ಮೂರು ಪ್ರಮಾಣಪತ್ರಗಳು ಅಂದರೆ, ಅವನು/ಅವಳು ಅಂತಿಮವಾಗಿ ವ್ಯಾಸಂಗ ಮಾಡಿದ ಸಂಸ್ಥೆಯ ಮುಖ್ಯಸ್ಥರಿಂದ ವಿದ್ಯಾಭ್ಯಾಸದ ವಿವರಗಳೊಂದಿಗೆ ಪಡೆದ ಒಂದು ಪ್ರಮಾಣಪತ್ರ ಮತ್ತು ಅವನು/ಅವಳು ಚೆನ್ನಾಗಿ ಪರಿಚಯವಿರುವ ಹಾಗೂ ಸಂಬಂಧಿಯಾಗಿರದ ಇಬ್ಬರು ಗೌರವಾನ್ವಿತ ವ್ಯಕ್ತಿಗಳಿಂದ ಪಡೆದ ಎರಡು ಪ್ರಮಾಣಪತ್ರಗಳನ್ನು ದಾಖಲಾತಿಗಳ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸತಕ್ಕದ್ದು.

೧೧. ಅಭ್ಯರ್ಥಿಗಳು ಯಾವುದೇ ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರ ಅಥವಾ ಸಾರ್ವಜನಿಕ ಉದ್ದಿಮೆಗಳಲ್ಲಿ ಉದ್ಯೋಗ ಹೊಂದಿದ್ದರೆ, ಅಂತಹ ಅಭ್ಯರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ **'ಹೌದು'** ಅಥವಾ **'ಇಲ್ಲ'** ಎಂಬುದನ್ನು ನಿಗದಿತ ಕಾಲಂನಲ್ಲಿ ನಮೂದಿಸತಕ್ಕದ್ದು ಮತ್ತು ಅವರು ಆಯ್ಕೆಗೊಂಡ ಸಂದರ್ಭದಲ್ಲಿ, ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು ೧೯೭೭ರ ತಿದ್ದುಪಡಿಯಾದ ನಿಯಮ ೧೧ರ ಪ್ರಕಾರ ಅವರು ಕರ್ತವ್ಯ ನಿರ್ವಹಿಸುತ್ತಿರುವ ಸಂಬಂಧಿತ ಇಲಾಖೆಯಿಂದ **'ನಿರಪೇಕ್ಷಣಾ ಪತ್ರ'** ವನ್ನು ಹಾಜರುಪಡಿಸತಕ್ಕದ್ದು.

೧೨. **<u>ಆನ್‌ಲೈನ್ ಅರ್ಜಿಯಲ್ಲಿ ನಮೂದಿಸಲಾದ ವರ್ಗ/ಮೀಸಲಾತಿಗಳು ಅಂತಿಮವಾಗಿರುತ್ತದೆ</u>. <u>ನಂತರ ಬದಲಾವಣೆ ಕೋರಿದ್ದಲ್ಲಿ ಅಂತಹ ಕೋರಿಕೆಗಳನ್ನು ಯಾವುದೇ ಸಂದರ್ಭದಲ್ಲಿಯೂ ಪರಿಗಣಿಸಲಾಗುವುದಿಲ್ಲ</u>.**

೧೩. ವಾಹನ ಚಾಲನ ಪರೀಕ್ಷೆ / ಸಂದರ್ಶನಕ್ಕೆ ಹಾಜರಾದ ಮಾತ್ರಕ್ಕೆ ನೇಮಕಾತಿಗೆ ಯಾವುದೇ ಹಕ್ಕನ್ನು ನೀಡಿದಂತಾಗುವುದಿಲ್ಲ ಮತ್ತು ಅಭ್ಯರ್ಥಿಯು ನೇಮಕಕ್ಕೆ ಎಲ್ಲಾ ರೀತಿಯಲ್ಲಿ ಸೂಕ್ತನಾಗಿದ್ದಾನೆ/ಳೆ ಎಂದು ಅಗತ್ಯವೆಂದು ಪರಿಗಣಿಸಬಹುದಾದ ವಿಚಾರಣೆಗಳ ನಂತರ ಕರ್ನಾಟಕ ಉಚ್ಚ ನ್ಯಾಯಾಲಯವು ತೃಪ್ತಿ ಹೊಂದದ ಹೊರತು ಯಾವುದೇ ಅಭ್ಯರ್ಥಿಯನ್ನು ಹುದ್ದೆಗೆ ನೇಮಿಸಲಾಗುವುದಿಲ್ಲ.

೧೪. ಚಾಲಕರ ಹುದ್ದೆಗೆ ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ಬೆಂಗಳೂರಿನಲ್ಲಿನ ಪ್ರಧಾನ ಪೀಠದಲ್ಲಾಗಲೀ ಅಥವಾ ಧಾರವಾಡ ಅಥವಾ ಕಲಬುರಗಿಗಳಲ್ಲಿನ ಪೀಠಗಳಲ್ಲಾಗಲೀ ನಿಯೋಜಿಸಲಾಗುವುದು.

೧೫. ಅಭ್ಯರ್ಥಿಗಳು ಅಭ್ಯರ್ಥಿಕೆಯ ಸಂದರ್ಭದಲ್ಲಿ ಸಿಬ್ಬಂದಿ ಅಥವಾ ಸಿಬ್ಬಂದಿಯೇತರ ಮೂಲಗಳ ಮೂಲಕ ಯಾವುದೇ ರೀತಿಯ ಬಾಹ್ಯ ಬೆಂಬಲವನ್ನು ಪಡೆಯುವ ಪ್ರಯತ್ನ ಮಾಡಿದಲ್ಲಿ ಅಂತಹ ಅಭ್ಯರ್ಥಿಗಳ ಅಭ್ಯರ್ಥಿಕೆಯನ್ನು ಅನರ್ಹಗೊಳಿಸಲಾಗುವುದು.

೧೬. **ಪರಿಶೀಲನೆಯ ಯಾವುದೇ ಸಮಯದಲ್ಲಿ ಅಥವಾ ನೇಮಕಾತಿಯ ಯಾವುದೇ ಹಂತದಲ್ಲಿ, ಅಭ್ಯರ್ಥಿಯು ಅರ್ಜಿಯಲ್ಲಿ ಒದಗಿಸಿರುವ ಮಾಹಿತಿಯು ಸುಳ್ಳು ಎಂದು ಕಂಡುಬಂದರೆ ಅಥವಾ ಅಭ್ಯಥಿಯು ಯಾವುದೇ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದಲ್ಲಿ ಅಥವಾ ಅವನು/ಅವಳು ಯಾವುದೇ ವಸ್ತುನಿಷ್ಠ ಸತ್ಯಗಳನ್ನು ತಿರುಚಿದರೆ ಅಥವಾ ಮೊಟಕುಗೊಳಿಸಿದರೆ, ಅವನ/ಅವಳ ಉಮೇದುವಾರಿಕೆಯನ್ನು ರದ್ದುಗೊಳಿಸಲಾಗುತ್ತದೆ. ನೇಮಕಾತಿಯ ನಂತರವೂ ಅಂತಹ ಯಾವುದೇ ನ್ಯೂನತೆಗಳು ಕಂಡುಬಂದರೆ, ಅವನ/ಅವಳ ನೇಮಕಾತಿಯನ್ನು ಕೊನೆಗೊಳಿಸಲಾಗುವುದು. ತಪ್ಪು, ಅಪೂರ್ಣ ಅಥವಾ ತಪ್ಪಾದ ಮಾಹಿತಿಯನ್ನು ಒದಗಿಸುವುದು ಅಭ್ಯರ್ಥಿಯ ಅನರ್ಹತೆಗೆ ಕಾರಣವಾಗುವುದಲ್ಲದೆ ಅಂತಹ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರನಾಗುತ್ತಾನೆ/ಳೆ.**

**ಗೌರವಾನ್ವಿತ ಮುಖ್ಯ ನ್ಯಾಯಮೂರ್ತಿಗಳ ಆದೇಶಾನುಸಾರ,**

ಸಹಿ/-

**(ಕೆ.ಎಸ್. ಭರತ್ ಕುಮಾರ್)**
**ಮಹಾವಿಲೇಖನಾಧಿಕಾರಿ**